ಆಯೋಗದ ವತಿಯಿಂದ ರಾಜ್ಯದ ಪಾಲಿಗೆ ಹಂಚಿಕೆಯಾದ ಹಣದಲ್ಲಿ ರೂ. 57.50 ಕೋಟಿಗಳು ಅಂದರೆ, ಒಟ್ಟಾರೆ ರೂ. 72.50 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಕೌಶಲ್ಯವರ್ಧನಾ ಕಾರ್ಯಕ್ರಮದಡಿಯಲ್ಲಿ ಯಾವ ಯಾವ ಕೌಶಲ್ಯ ತರಬೇತಿ ನೀಡಲಾಗುತ್ತಿದೆ

897 (1146) ಶ್ರೀ ಮಂಜು ಎ. (ಅರಕಲಗೂಡು) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ನಿರುದ್ಯೋಗಿ ಯುವಕರ ಕೌಶಲ್ಯ ವರ್ಧನಾ ಕಾರ್ಯಕ್ರಮದಡಿಯಲ್ಲಿ ಯಾವ ಯಾವ ಕೌಶಲ್ಯ ತರಬೇತಿ ನೀಡಲಾಗುತ್ತದೆ;

ಆ) ಈ ವಿಷಯದಲ್ಲಿ ಸರ್ಕಾರವು ಹೊರಡಿಸಿರುವ ಆದೇಶದ ಪ್ರತಿ ಮತ್ತು ಮಾರ್ಗಸೂಚಿ ಪ್ರತಿಗಳನ್ನು ಒದಗಿಸಲಾಗುವುದೇ?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :

ಅ) ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮವು 16 ಕ್ಷೇತ್ರಗಳಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ ಪ್ರಾರಂಭಿಸಿದೆ. ಆ ಕ್ಷೇತ್ರಗಳು (ಸೆಕ್ಟರ್) ಕೃಷಿ, ಉತ್ಪಾದನೆ, ಅತಿಥ್ಯ, ಕಂಪ್ಯೂಟರ್ ತರಬೇತಿ, ಕಟ್ಟಡ ನಿರ್ಮಾಣ, ರೀಟೈಲ್, ಬಿಪಿಓ, ಜುವೆಲ್ಲರಿ, ಮಾಹಿತಿ ತಂತ್ರಜ್ಞಾನ, ಪ್ಯಾಬ್ರಿಕೇಷನ್, ಸೆಕ್ಯೂರಿಟಿ, ಇಲೆಕ್ಟ್ರಿಕಲ್, ಇಲೆಕ್ಟ್ರಾನಿಕ್ಸ್, ಬ್ಯೂಟೀಷಿಯನ್, ಕೆಮಿಕಲ್ ಮತ್ತು ಉಡುವು (ಗಾರ್ಮೆಂಟ್ಸ್).

ಆ) ಈ ವಿಷಯದಲ್ಲಿ ಸರ್ಕಾರವು ಹೊರಡಿಸಿರುವ ಆದೇಶದ ಪ್ರತಿ ಮತ್ತು ಮಾರ್ಗಸೂಚಿ ಪ್ರತಿಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

ಅನುಬಂಧ – 1

PROCEEDINGS OF THE GOVERNMENT OF KARNATAKA

Subject : Creation of Karnataka Vocational Training and Skill Development Corporation

Read : 1) Budget Speech 2007-08, made by Hon'ble Deputy Chief Minister

and Minister for Finance Department.

2) **Correspondence resting with letter No. ಉತನಿ/ತ/ಯೋ-01/ವಿವ-04/07-08, dated: 4/10/2007.**
3) **Proceedings of the meetng under the Chairmanship of Principal Secretary, Finance Department dated: 11/9/2007**
4) **Proceedings of the meeting under the Chairmanship of Principal Secretary, Public Enterprses Department, dated: 29/12/2007**

PREAMBLE :

Hon'ble Deputy Chief Minister and Minister for Finance, Karnataka while delivering the Budget speech for the year 2007-08 has announced for creation of Corporation to promote Employment to skilled people who are intended to go abroad. It is necessary to initiate re-departure Training under this State Government will implement Government of India scheme viz Orientation cum Training program Scheme for overseas workers. In the budget for the year 2007-08, a Provision of Rs. 205.00 lakhs has been made for Manpower Development Corporation and Rs.100 lakhs for Karnataka Vocational Training Corporation.

The Objectives of the Corporation are as unde:

1) To design, develop and implement various skill-training programs based on the emerging trades.
2) To impart training in multi skills, considering the demand of industries.
3) To assist, implement and strengthen State council for Vocational Training (SCVT)
4) To implement Modular Employable skilled (MES) short, term training programs as per DGE&T norms

5) To implement various employment generating training programs sponsored by Govt. Public sector, Enterprises, Corporations, Boards, Local Bodies, and Associates etc.
6) To run distance learning training programs in association with Edu-Sat.
7) To assist implement and strengthen State Project Implementation Unit (SPIU) to implement, carryout, administer, manage the schemes entrusted by GOI

In the meeting held by Principal Secretary, Public Enterprises Department, after a detailed discussion approval has been given to create Karnataka Vocational Training and skill Development Corporation. Hence the following Order.

GOVERNMENT ORDER NO. LD 142 ETI 2007
DATED: 02/04/2008

Sanction is accorded to create Karnataka, Vocational Training and Skill Development Corporation. The Commissioner, Employment & Training shall be the Managing Director of the Corporation.

This order is issued with the concurrence of Finance Department vide U.O. Note No. FD 696 Exp-9/2007(p) dated: 01/12/2007, concurrence of Planning Department vide their Note No.PD 59 MP 2007, dated 17.05.2007 and Public Enterprises Department vide U.O. Note No. ಸಾಆಇ 78 ಎಸ್‌ಪಿಯು 2007 dated: 22/01/2008.

By order and in the name of
President of India

Abdul Rehman
Desk Officer
Labour Department
(Employment and Training)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕೌಶಲ್ಯ ಅಭಿವೃದ್ಧಿ ಆರೋಗ್ಯದ ರಚನೆ ಕುರಿತು.

*****

ಪ್ರಸ್ತಾವನೆ :

ಉತ್ಪಾದನಾ, ನಿರ್ಮಾಣ, ಆತಿಥ್ಯ, ಪ್ರವಾಸೋದ್ಯಮ ಇತ್ಯಾದಿ ಹಲವಾರು ರಂಗಗಳಲ್ಲಿ ಕೌಶಲ್ಯತೆಯ ಬೇಡಿಕೆಯು ಕಾರ್ಮಿಕ ಮಾರುಕಟ್ಟೆಯಲ್ಲಿ ಇರುವುದನ್ನು ರಾಜ್ಯ ಸರ್ಕಾರವು ಮನಗಂಡಿರುತ್ತದೆ. ಕೇಂದ್ರ ಸರ್ಕಾರವೂ ಸಹ ದೇಶದ ಒಳಗೆ ಹಾಗೂ ದೇಶದ ಹೊರಗಡೆ ಇರುವ ಕೌಶಲ್ಯತಾ ಮಾನವ ಶಕ್ತಿಯ ಬೇಡಿಕೆಯನ್ನು ಪೂರೈಸುವಲ್ಲಿ ಭಾರತವು ಮಂಜೂಣಿಯಲ್ಲಿರತಕ್ಕದ್ದು ಎನ್ನುವುದನ್ನು ಪರಿಗಣಿಸಿ, ರಾಷ್ಟ್ರೀಯ ಕೌಶಲ್ಯತಾ ಅಭಿವೃದ್ಧಿ ಪಾಲಿಸಿಯನ್ನು ತರಲು ಯೋಜಿಸುತ್ತಿದೆ. ಈ ಯೋಜನೆಯು ಮಾರುಕಟ್ಟೆಯಲ್ಲಿ ಬೇಡಿಕೆಯಲ್ಲಿರುವ ಕೌಶಲ್ಯದ ಕೊರತೆ ಯಿಂದಾಗಿ ಬಳಸಲುತ್ತಿರುವ ನಿರುದ್ಯೋಗಿ ಯುವಜನಾಂಗಕ್ಕೆ ಕೌಶಲ್ಯತೆಯ ತರಬೇತಿಯನ್ನು ನೀಡಿ ಮಾರುಕಟ್ಟೆ ಬೇಡಿಕೆಗೆ ಇವರನ್ನು ಅನುವುಗೊಳಿಸುವುದಕ್ಕೆ ಸಹಕಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಯವರು 2008–09ನೇ ಸಾಲಿನ ಆಯವ್ಯಯ ಭಾಷಣದಲ್ಲಿ ರಾಜ್ಯ ಸರ್ಕಾರವು ಕೌಶಲ್ಯ ಅಭಿವೃದ್ಧಿ ಆಯೋಗವನ್ನು ರಚಿಸಿ, 2008–09ನೇ ಸಾಲಿನಲ್ಲಿ ಒಂದು ಲಕ್ಷ ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿಯನ್ನು ನೀಡಿ, ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ ಎನ್ನುವುದಾಗಿ ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ಕೌಶಲ್ಯ ಅಭಿವೃದ್ಧಿ ಆಯೋಗವನ್ನು ರಚಿಸಲು ತೀರ್ಮಾನಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಕಾಇ 317 ಇಟಿಇ 2008
ಬೆಂಗಳೂರು ದಿನಾಂಕ: 6–9–2008

ಕರ್ನಾಟಕ ಸರ್ಕಾರವು ಈ ಕೆಳಗಿನಂತೆ ಕೌಶಲ್ಯ ಆಯೋಗವನ್ನು ರಚಿಸಲು ಮಂಜೂರಾತಿಯನ್ನು ನೀಡಿದೆ.

ಕ್ರ.ಸಂ.	ಸದಸ್ಯರ ಹೆಸರು	ಹುದ್ದೆ
1	ಮುಖ್ಯಮಂತ್ರಿ	ಅಧ್ಯಕ್ಷರು
2	ಕಾರ್ಮಿಕ ಸಚಿವರು	ಉಪಾಧ್ಯಕ್ಷರು
3	ಅಬಕಾರಿ, ವಾರ್ತಾ, ಮಾಹಿತಿ ಮತ್ತು	ಸದಸ್ಯರು

	ಜೈವಿಕ ತಂತ್ರಜ್ಞಾನ ಸಚಿವರು	
4	ಬೃಹತ್ ಕೈಗಾರಿಕಾ ಸಚಿವರು	ಸದಸ್ಯರು
5	ಸಣ್ಣ ಕೈಗಾರಿಕಾ ಸಚಿವರು	ಸದಸ್ಯರು
6	ಮುಖ್ಯ ಕಾರ್ಯದರ್ಶಿ	ಸದಸ್ಯರು
7	ಶ್ರೀ ಮನಿಷ್ ಸಬರ್‌ವಾಲ್, ಅಧ್ಯಕ್ಷರು, ಟೀಮ್ ಲೀಸ್ ಸ್ಟಾಫಿಂಗ್ ಸಲ್ಯೂಷನ್ಸ್, ಬೆಂಗಳೂರು	ಸಲಹೆಗಾರರು
8	ಶ್ರೀ ಟಿ.ವಿ.ಮೋಹನ್‌ದಾಸ್ ಪೈ., ಇನ್‌ಫೋಸಿಸ್ ಟೆಕ್ನಾಲಜೀಸ್ ಲಿಮಿಟೆಡ್	ಸದಸ್ಯರು
9	ಶ್ರೀ ಮದನ್‌ಲಾಲ್ ಜೆ.ಹಿಂದೂಜ, Chair-person, ಗೋಕುಲ್‌ದಾಸ್ ಎಕ್ಸ್‌ಪೋರ್ಟ್, ಬೆಂಗಳೂರು	ಸದಸ್ಯರು
10	ಶ್ರೀ ಜಯಶಂಕರ್, ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಆದರ್ಶ ಡೆವಲಪರ್ಸ್, ಬೆಂಗಳೂರು	ಸದಸ್ಯರು
11	ಶ್ರೀ ಬಾಲಾಜಿ, ಆರ್‌ಕಿಡ್ ಹೋಟೆಲ್ಸ್, ಬೆಂಗಳೂರು	ಸದಸ್ಯರು
12	ಡಾ: ರಂಜನ್ ಪೈ, ಮಣಿಪಾಲ್ ಗ್ರೂಪ್ ಆಫ್ ಹಾಸ್ಪಿಟಲ್ಸ್, ಬೆಂಗಳೂರು	ಸದಸ್ಯರು
13	ಶ್ರೀ ಬಿ.ಎಂ. ಕಿರಣ್, ಕ್ವಿಸಾರ ಟೆಕ್ನಾಲಜೀಸ್, ಬೆಂಗಳೂರು	ಸದಸ್ಯರು
14	ಶ್ರೀ ಆನಂದ್ ಸಂಕೇಶ್ವರ್, ವಿ.ಆರ್.ಎಲ್. ಗ್ರೂಪ್ಸ್, ಹುಬ್ಬಳ್ಳಿ	ಸದಸ್ಯರು
15	ಶ್ರೀಮತಿ ವಿದ್ಯಾಮುರುಕುಂಬಿ, ಅಧ್ಯಕ್ಷರು, ಮೆ:ರೇಣುಕಾ ಶುಗರ್ಸ್, ಬೆಳಗಾವಿ	ಸದಸ್ಯರು
16	ಶ್ರೀ ಬಿಜು ಕುರಿಯನ್, ರಿಲಯನ್ಸ್ ಇಂಡಸ್ಟ್ರೀಸ್ (ರೀಟೆಲ್), ಬೆಂಗಳೂರು ವಿಭಾಗ, ಬೆಂಗಳೂರು	ಸದಸ್ಯರು

17	ಶ್ರೀ ನಂದಕಿಶೋರ್ ಮಾಲು, ಮಾಲು ಇಂಡಸ್ಟ್ರೀಸ್, ಇಂಡಸ್ಟ್ರಿಯಲ್ ಎಸ್ಟೇಟ್, ಗುಲ್ಬರ್ಗಾ	ಸದಸ್ಯರು
18	ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	ಸದಸ್ಯರು
19	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ	ಸದಸ್ಯರು
20	ಸರ್ಕಾರದ ಕಾರ್ಯದರ್ಶಿ (ಸಪ್ರಕೈ, ಗಣಿ ಮತ್ತು ಜವಳಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	ಸದಸ್ಯರು
21	ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ	ಸದಸ್ಯರು
22	ಆಯುಕ್ತರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು	ಸದಸ್ಯರು
23	ಡಾ: ವಿಷ್ಣುಕಾಂತ್ ಎಸ್. ಚಿತ್‌ಪಳ್ಳಿ, ನಿರ್ದೇಶಕರು, ನಾಲೆಡ್ಜ್ ಪಾರ್ಕ್ ಆಫ್ ಇಂಡಿಯಾ ಟ್ರಸ್ಟ್, ಬೆಂಗಳೂರು	ಸದಸ್ಯರು
24	ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು	ಸದಸ್ಯ ಕಾರ್ಯದರ್ಶಿ

ಈ ಆಯೋಗದ ಕಾರ್ಯಗಳು ಈ ಕೆಳಗಿನಂತೆ ಇದೆ.

1) ಕೌಶಲ್ಯ ಅಭಿವೃದ್ಧಿಗಾಗಿ :

ಅ) ಸ್ಥೂಲ ಕಾರ್ಯನೀತಿ ರೂಪಿಸುವುದು.

ಆ) ಕಾರ್ಯತಂತ್ರ ರೂಪಿಸುವುದು.

ಇ) ಆಡಳಿತ ಹಾಗೂ ಆರ್ಥಿಕ ರೂಪುರೇಷೆಗಳನ್ನು ನಿರ್ಧರಿಸುವುದು.

2) ಕೌಶಲ್ಯ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳ ಪ್ರಗತಿಯನ್ನು ನಿಯತಕಾಲಿಕವಾಗಿ ಪರಿಶೀಲನೆ ನಡೆಸುವುದು.

3) ಈ ಯೋಜನೆಯ ಅನುಷ್ಠಾನದ ಅವಧಿಯಲ್ಲಿ ಅವಶ್ಯಕಂಡ ಸೂಕ್ತ ಬದಲಾವಣೆಗಳನ್ನು ತರುವ ಬಗ್ಗೆ ನಿರ್ಧರಿಸುವುದು.

4) ಖಾಸಗಿ ಮತ್ತು ಸಾರ್ವಜನಿಕ ವಲಯಗಳ ಕಾರ್ಯಕ್ರಮಗಳನ್ನು ಒಂದುಗೂಡಿಸಿ ಸಹಭಾಗಿತ್ವದೊಂದಿಗೆ ಕಾರ್ಯ ನಿರ್ವಹಿಸುವಂತೆ ಆಯೋಜಿಸುವುದು.

5) ಈ ಮೇಲಿನ ಕಾರ್ಯಗಳನ್ನು ಅನುಷ್ಠಾನಗೊಳಿಸಲು/ ನಿರ್ವಹಿಸಲು ಆಯೋಗವು ಆಗಿಂದಾಗ್ಗೆ ಸಭೆ ನಡೆಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎ.ಎಸ್. ವಿಶ್ವೇಶ್ವರಯ್ಯ
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ,
(ಉದ್ಯೋಗ ಮತ್ತು ತರಬೇತಿ)

ಗಂಗಾ ಕಲ್ಯಾಣ ಯೋಜನೆ

898 (816) ಶ್ರೀ ನರಸಿಂಹ ಸ್ವಾಮಿ.ಜೆ (ದೊಡ್ಡಬಳ್ಳಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಂಗಾ ಕಲ್ಯಾಣ ಯೋಜನಾವತಿಯಿಂದ 2009–10ನೇ ಸಾಲಿನ ಫಲಾನುಭವಿಗಳ ಆಯ್ಕೆ ಮುಗಿದಿದ್ದು, ಇದನ್ನು ಆವಾಗ ಅನುಷ್ಠಾನ ಗೊಳಿಸಲಾಗುವುದು; ಅನುಷ್ಠಾನಗೊಳಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸರ್ಕಾರ ನಿಗದಿಪಡಿಸಿರುವ ಅಂದಾಜು ವೆಚ್ಚಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೊಳವೆಬಾವಿ ಕೊರೆಯಲು ಸಾಧ್ಯವೆ;

ಇ) ಹಾಗಿದ್ದಲ್ಲಿ, ಸರ್ಕಾರ ನೀಡುತ್ತಿರುವ ಹಣ ಯೋಜನೆ ಪೂರ್ತಿಗೊಳಿಸಲು ಸಾಕಾಗುತ್ತಿದೆಯೇ; ಇಲ್ಲವಾದಲ್ಲಿ, ಪ್ರಾಂತ್ಯವಾರು